ಶ್ರೀ ಆರ್. ಮುನಿಸ್ವಾಮಯ್ಯ.—ಪ್ರೌಢಶಾಲೆಗಳಲ್ಲಿ ಪದವೀಧರರ ಅವಶ್ಯಕತೆ ಬಹಳ ವಾಗಿದೆಯೇ

ಶ್ರೀ ಎಸ್. ಆರ್. ಕಂಠಿ.—ಅವಶ್ಯಕತೆ ಇದೆಯೆಂದು ಈಚೆಗೆ ಕಂಡುಬರುತ್ತಿದೆ. The recent thinking is that graduates should work as teachers in the middle schools.

Misappropriation of amount in the G. M. P. Society, Ltd., Shigli in Shirahatti Taluk.

*Q.—691. Sri SIDDAIAH KASHIMATH (Shirahatti).—

Will the Government be pleased to state :—

(*a*) whether it is a fact that a Special Auditor audited the accounts of the G. M. P. Society Ltd., Shigli in Shirahatti Taluk;

(*b*) if so, the amount misappropriated as per the Auditor's report;

(*c*) the action taken by them regarding the mis-appropriation that has taken place in the Society ?

A.—Sri KONDAJJI BASAPPA (Deputy Minister for Co-operation).—

(*a*) It was not a Special Auditor, but the Auditor, for Co-operative Societies, Gadag, who audited the accounts of the Society.

(*b*) Rs. 10,106-85 paise. This amount was determined by the enquiry officer after completion of Audit by the Auditor.

(*c*) A complaint was lodged with the Police. Action has also been taken under the provision of law applicable to the case to recover the amount misappropriated.

Sri SIDDAIAH KASHIMATH.—Since how many years is the case pending with Government ?

Sri KONDAJJI BASAPPA.—Since 1956, the matter is pending.

Sri SIDDAIAH KASHIMATH.—Whether a special enquiry officer has been appointed for that society and in what year ?

Sri KONDAJJI BASAPPA.—A special enquiry officer was appointed.

Sri SIDDAIAH KASHIMATH.—May I know whether he has submitted his report and according to his report, how much money has been misappropriated ?

Sri KONDAJJI BASAPPA.—He submitted his report on 15th March 1956 prior to the re-organisation of the States, and the amount involved is Rs. 10,406 or so.

Sri SIDDAIAH KASHIMATH.—In answer to (*c*), it is stated that a complaint has been lodged with the police. When was the complaint lodged ?

Sri KONDAJJI BASAPPA.—It was lodged on 11th July 1955.

Sri GANJI VEERAPPA.—May I know whether any prosecution has been launched against this person in the court ?

Sri KONDAJJI BASAPPA.—A complaint was lodged and it has ended in "C-Summunary".

ಶ್ರೀ ಟಿ. ಕೆ. ಕಂಬಳಿ.—ದುರುಪಯೋಗವಾಗಿರುವ ಹಣವನ್ನು ಜಮಾ ಮಾಡಿದರೆ ಅಥವಾ ಇಲ್ಲವೆ ? ಜಮಾ ಮಾಡಿದ್ದರೆ ದೂರು ಕೊಟ್ಟಮೇಲೆ ಜಮಾ ಮಾಡಿದರೆ ಅಥವಾ ಅದಕ್ಕೆ ಮುಂಚೆ ಜಮಾ ಮಾಡಿದರ ?

ಶ್ರೀ ಕೊಂಡಜ್ಜಿ ಬಸಪ್ಪ.—ದೂರು ಕೊಟ್ಟಮೇಲೆ ಆನರೇರಿಯಂ 3,400 ರೂಪಾಯಿಗಳನ್ನು ಜಮಾಮಾಡಿದರು. ಇನ್ನು ಸ್ವಲ್ಪ ಹಣದ ವಿಚಾರದಲ್ಲಿ ಆನರೇರಿಯಂ ಕೊಡಬೇಕೆ ಬೇಡವೆ ಎಂಬುದು ಜಿಜ್ಞಾಸೆಯಲ್ಲಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೊನ್ನೆಯದಿನ ಹಣ ಕೊಟ್ಟರೆ ಪ್ರಾಸಿಕ್ಯೂಷನ್ ಬೇಕಾಗಿಲ್ಲ ಎಂದು ಸರ್ಕ್ಯುಲರ್ ಇದೆ ಎಂದು ಹೇಳಿದರು. ಹಾಗಿದ್ದರೆ ಈ ಸಂದರ್ಭದಲ್ಲಿ 10,106 ರೂಪಾಯಿ 85 ಪೈಸಾ ಪಾವತಿಮಾಡಿದರೆ ಪ್ರಾಸಿಕ್ಯೂಷನ್ ವಿತ್‌ಡ್ರಾ ಮಾಡುವುದನ್ನು ಯೋಚನೆಮಾಡುತ್ತೀರಾ?

Mr. SPEAKER.—It is hypothetical. His premises are wrong. The circular which the hon'ble member refered to does not read like this.

Sri C. J. MUCKANNAPPA.—Please bear with me Sir. Day before yesterday for a supplementary, the Hon'ble Deputy Minister said that if the person who is involved in a misappropriation case comes forward with the money, even if there is a prosecution, Government is prepared to withdraw. That is why I put that question.

ಶ್ರೀ ಸಿದ್ದಯ್ಯ ಕಾಶೀಮಠ್.—ಆನರೆರಿ ಸೆಕ್ರೆಟರಿ ನೂರು ರೂಪಾಯಿ ಕೊಡಬೇಕೆಂದು ತಿದ್ದಿರುವ ವಿಚಾರದಲ್ಲೇನು ಕ್ರಮಕೈಕೊಳ್ಳಲಾಗಿದೆ ?

Sri KONDAJJI BASAPPA.—We have instructed the department to take all necessary steps under law to proceed against him, both criminal and civil.

12-30 P.M.

ಶ್ರೀ ಕೆ. ಲಕ್ಕಪ್ಪ.—ಸಹಕಾರ ಸಂಘಗಳಲ್ಲಿ ಗೌರವ ಕಾರ್ಯದರ್ಶಿಗಳಾಗಿದ್ದುಕೊಂಡು ಅಲ್ಲಿನ ಹಣವನ್ನು ಚಪಾವಣೆ ಮಾಡಿರತಕ್ಕ ಸಂದರ್ಭಗಳಲ್ಲಿ ಅಂತಹವರ ಬ್ಲಾಕ್‌ಲಿಸ್ಟ್ ಎಂದು ಮಾಡಲು ಸರಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಯಾರ ಮೇಲೆ ದುರುಪಯೋಗದ ಆಪಾದನೆಗಳು ಬಂದಿವೆಯೋ ಅಂತಹವರನ್ನು ಬ್ಲಾಕ್ ಲಿಸ್ಟ್‌ನಲ್ಲಿ ಸೇರಿಸಿ ಪ್ರಕಟಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಈಗಲಾದರೂ ಈ ಸೊಸೈಟಿಯ ವ್ಯವಹಾರಗಳನ್ನು ಬೇಗನೆ ಮುಗಿಸಿ ಇನ್ನು ಮುಂದೆ ಚೆನ್ನಾಗಿ ಕೆಲಸ ಮಾಡಲು ಏರ್ಪಾಡು ಮಾಡುತ್ತೀರಾ ?

Sri KONDAJJI BASAPPA.—In fact we have issued instructions to the Deputy Registrar of Co-operative Societies, Belgaum, to see that the whole thing is ended as early as possible and the working of the society is brought into being.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸೊಸೈಟಿಗಳಲ್ಲಿ ನಾನ್‌ಅಫಿಷಿಯಲ್ಸ್‌ಗಳು ಕೆಲಸ ಮಾಡುತ್ತಿರುವಾಗ ಆನರೇರಿಯಂ ಕೊಡಬೇಕಾದರೆ ರಿಜಿಸ್ಟ್ರಾರ್‌ರವರ ಮಂಜೂರಾತಿ ಇರಬೇಕು. ಆ ರೀತಿ ಇಲ್ಲಿ ಮಂಜೂರಾತಿ ಕೊಡಲಾಗಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಹಾಗೆ ಕೊಡಬೇಕೆಂದು ಇತ್ತು. ಆದರೆ ಇತ್ತೀಚೆಗೆ ಇಲ್ಲಿ 3,000 ರೂಪಾಯಿ ಆನರೇರಿಯಂನ್ನು ಅಡ್‌ಜಸ್ಟು ಮಾಡಿಕೊಳ್ಳುವ ಪ್ರಸಂಗ ಬಂದಾಗ ಇಲ್ಲಿ ಇನ್‌ಸ್ಪೆಕ್ಷನ್ ಕೂಡ ಆಗಿದೆ ಎಂದು ಪ್ರೊಸೀಡಿಂಗ್ಸ್‌ನಿಂದ ತಿಳಿದುಬಂದುದರಿಂದ ಇದರ ಬಗ್ಗೆ ಎನ್‌ಕ್ವೈರಿ ಮಾಡಬೇಕೆಂದು ಆರ್ಡರು ಮಾಡಲಾಗಿದೆ.

Sri GANJI VEERAPPA.—Inspite of the fact that a huge amount is misappropriated and it has come to the notice of the Government some eight years back, how is it there is such a long delay and no severe action is taken ?

ಶ್ರೀ ಕೊಂಡಜ್ಜಿ ಬಸಪ್ಪ.—ಇದು ಬೊಂಬಾಯಿ ಸರಕಾರದಲ್ಲಿದ್ದಾಗಲೇ ಅಲ್ಲಿನ ಆಕ್ಟು ಪ್ರಕಾರ ಎನ್‌ಕ್ವೈರಿ ನಡೆಯುತ್ತಿತ್ತು. ಆ ಭಾಗಗಳು ಇಲ್ಲಿಗೆ ಸೇರಿದ ಮೇಲೆ ಇಲ್ಲಿನ ಅಧಿಕಾರಿಗಳು ಹೋಗಿ ಎನ್‌ಕ್ವೈರಿ ಮಾಡುವುದರಲ್ಲಿ ಸ್ವಲ್ಪಮಟ್ಟಿನ ನಿಧಾನವಾಗಿದೆ.

ಶ್ರೀ ಕೆ. ಲಕ್ಕಪ್ಪ.—ಸಹಕಾರ ಕ್ಷೇತ್ರದಲ್ಲಿ ಹಣ ದುರುಪಯೋಗವಾಗತಕ್ಕ ವಿಷಯಗಳು ಈ ದೇಶದಲ್ಲಿ ಸರ್ವೇಸಾಮಾನ್ಯವಾಗಿದೆ. ಆದ್ದರಿಂದ ದೇಶದಲ್ಲಿರುವ ಸಹಕಾರ ಸಂಘಗಳಲ್ಲಿ ಎಲ್ಲಿ ಹಣ ದುರುಪಯೋಗವಾಗಿದೆ ಅಂತಹ ಕಡೆಗಳಲ್ಲೆಲ್ಲಾ ಜುಡಿಷಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ಅವಕಾಶ ವನ್ನು ಕಲ್ಪಿಸಿ ಕೊಡುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಇದು ಈ ಪ್ರಶ್ನೆಯಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಹಣ ದುರುಪ ಯೋಗವಾಗಿ ಎಂಟು ವರ್ಷಗಳಾದರೂ ಶಿರಹಟ್ಟಿಯೆಲ್ಲರುವ ಸರ್ಕಾರ ಸಂಘದ ಕಾರ್ಯದರ್ಶಿಗಳ ಮೇಲೆ ಏನೂ ಕ್ರಮ ತೆಗೆದುಕೊಳ್ಳದೇ ಇರಲು ಇವರು ಶಿರಹಟ್ಟಿ ಕಾಂಗ್ರೆಸ್ಸಿನಲ್ಲಿರುವ ಕಮಿಟಿ ಚೇರ್ಮನ್ನರಾಗಿರುವುದರಿಂದ ಅಲ್ಲವೇ ? (ನಗು)

[ಉತ್ತರವಿಲ್ಲ.]

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇಲ್ಲಿ ಪೊಸ್ ಅಪ್ರೊಪ್ರಿಯೇಷನ್ನಿನ ಜೊತಗೆ ಇನ್‌ನರ್ಷನ್ ಕೂಡ ಆಗಿದೆ ಎಂದು ಹೇಳುತ್ತೀರಿ. ಹಾಗಾದರೆ ಇಲ್ಲಿ ಎರಡು ಅಪಾದನೆಗಳು ಆದವು. ಹಾಗಿದ್ದರೂ ಇವರನ್ನು ಇನ್ನೂ ಕಾರ್ಯದರ್ಶಿಗಳಾಗಿ ಮುಂದುವರಿಸುತ್ತಿದ್ದೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಅವರು ಕಾರ್ಯದರ್ಶಿಗಳಾಗಿ ಮುಂದುವರಿಯುತ್ತಿಲ್ಲ.

Damage caused to the Lands due to the Breach of Feeder Channel leading to Tumkur-Amanikere Tank at Swandenahalli Village in Tumkur Taluk.

*Q.—699. Sri G. C. BHAGEERATHAMMA (Tumkur).—

Will the Government be pleased to state :—

(*a*) whether it has come their notice that damage has been caused to hundreds of acres of land due to the breach of feeder channel leading to Tumkur-Amanikere Tank at Swandenahalli Village, Kasaba Hobli, Tumkur Taluk ;

(*b*) if so, the steps they have taken in this behalf ?

*A.—Sri ALUR HANUMANTHAPPA (Deputy Minister for Minor Irrigation).—

(*a*) Yes.

(*b*) An estimate for providing flood control work on this halla near Swandenahalli has been got up and work will be taken up after sanction.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈ ನಾಲೆ ಒಡೆದು ಹೋಗಿರುವುದು ಸರಕಾರದ ಗಮನಕ್ಕೆ ಬಂದು ಎಷ್ಟು ದಿನಗಳಾದವು ?

† ಶ್ರೀ ಆಲೂರು ಹನುಮಂತಪ್ಪ.—ಸರಕಾರದ ಗಮನಕ್ಕೆ ಬಂದು ಇದರ ಬಗ್ಗೆ ಅಂದಾಜು ಕೂಡ ಆಗಿದೆ. 1962ನೇ ಇಸವಿಯಲ್ಲಿ ಸೆಪ್ಟಂಬರು ಹಾಗೂ ಅಕ್ಟೋಬರು ತಿಂಗಳುಗಳಲ್ಲಿ ಹೆಚ್ಚಿನ ಮಳೆ ಬಂದುದರಿಂದ ಇಲ್ಲಿ ಸ್ವಲ್ಪ ಡ್ಯಾಮೇಜು ಆಗಿದೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈ ಬಗ್ಗೆ ಕ್ರಮ ತೆಗೆದುಕೊಳ್ಳುವ ವಿಚಾರದಲ್ಲಿ ಇಷ್ಟು ನಿಧಾನವಾಗಲು ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲಿ ಸ್ವಲ್ಪ ಸಿಲ್ಟನ್ನು ತೆಗೆಯಬೇಕೆಂದು ಇತ್ತು. ಇದರ ಬಗ್ಗೆ ಅಂದಾಜು ಆಗಿ ಈಚೆಗೆ ಮಂಜೂರಾಗಿದೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಮಂಜೂರಾಗಿ ಎಷ್ಟು ವರ್ಷಗಳಾದವು ?

ಶ್ರೀ ಆಲೂರು ಹನುಮಂತಪ್ಪ.—ಹೋದ ತಿಂಗಳು ಇದು ಮಂಜೂರಾಗಿದೆ.